ಗತಿಸಿಹೋಗಿದ್ದವು. ನನಗೆ ಯಾಕೋ ಅವರನ್ನೊಮ್ಮೆ ನೋಡಲೇಬೇಕೆಂಬ ತಹ ತಹ ಉಂಟಾಗಿತ್ತು. ಆದರೆ ನನಗೊಬ್ಬನಿಗೇ ಅವರನ್ನು ಭೇಟಿಯಾಗುವ ಧೈರ್ಯವಿರಲಿಲ್ಲ. ಹಾಗಾಗಿ ಸೀತಣ್ಣನನ್ನು ವಿಚಾರಿಸಿದೆ. 'ಬರುವ ರವಿವಾರ ಬೆಳಿಗ್ಗೆ ನಮ್ಮ ಮನೆಗೆ ಬನ್ನಿ. ಹೋಗುವಾ. ಅವರು ಫ್ರೀ ಇರ್ತಾರಾ ಅಂತ ಒಮ್ಮೆ ವಿಚಾರಿಸ್ತೇನೆ. ಫ್ರೀ ಇಲ್ಲ ಅಂತಾದರಷ್ಟೇ ನಿಮಗೆ ಫೋನಾಯಿಸ್ತೇನೆ' ಅಂದರು.

ಅಂದುಕೊಂಡಂತೆಯೇ ನಾವು ಅಂದು ರವಿವಾರ ಬೆಳಿಗ್ಗೆ ಎಡಚನಹಳ್ಳಿಯ ಪ್ರಶಾಂತಿಧಾಮಕ್ಕೆ ಹೊರಟೆವು. ಇಬ್ಬರಲ್ಲೂ ಅಸಹನೀಯ ತಳಮಳ. ಗಂಭೀರ ಮೌನ. ಮಾತನಾಡಲೇಬೇಕಾದ ಒಂದೊಂದು ಶಬ್ದಕ್ಕೂ ತಡಕಾಡುವ ಪರಿಸ್ಥಿತಿ. ಹನ್ನೊಂದು ಗಂಟೆಯ ಸುಮಾರಿಗೆ ಕುಮಾರ್ ಅವರ ಫಾರ್ಮ್ ಹೌಸಿನಲ್ಲಿ ಇದ್ದೆವು. ಏನು ಮಾತನಾಡಬೇಕು. ಅವರನ್ನು ಹೇಗೆ ಸಂತೈಸಬೇಕು ಎನ್ನುವುದೇ ನಮಗೆ ಬಿಡಿಸಲಾಗದ ಕಗ್ಗಂಟಾಗಿತ್ತು. ಕುಮಾರ್ 'ಗುಡ್‌ಮಾರ್ನಿಂಗ್' ಹೇಳುತ್ತ ಒಳಗಿನಿಂದ ನಿಧಾನವಾಗಿ ಹೊರಬಂದು ಕುರ್ಚಿಯೊಂದರಲ್ಲಿ ಮೈ ಚೆಲ್ಲಿದರು. ಅವರ ನೋಟದಲ್ಲಿ ಕೊಂಚ ಗಲಿಬಿಲಿಯಿತ್ತು. ಮನಸ್ಸನ್ನು ತಹಬದಿಯಲ್ಲಿಟ್ಟುಕೊಳ್ಳಲು ಅವರು ಹರಸಾಹಸ ಪಡುತ್ತಿರುವುದು ಸ್ಪಷ್ಟವಾಗಿ ಗೋಚರಿಸುತ್ತಿತ್ತು. ಕೆಲವು ಕ್ಷಣ ಮೌನವೇ ಮಾತಾಡಿತು. 'ಒಂಟಿಯಾದರೂ ಇನ್ನೂ ನಾನು ಬಾಳಬೇಕು, ನನ್ನ ಕೆಲಸ–ಕಾರ್ಯಗಳನ್ನು ಎಂದಿನಂತೆಯೇ ಮುಂದುವರಿಸಿಕೊಂಡು ಹೋಗಬೇಕು ಅಂತ ನನಗೆ ಒಬ್ಬರು ಸದಾ ಹೇಳ್ತಿರ್ತಾರೆ, ಯಾರು ಗೊತ್ತಾ?' ಕುಮಾರ್ ತಡೆ–ತಡೆದು ಪ್ರಶ್ನಿಸಿದರು. ನಾವು ಇಲ್ಲವೆಂದು ತಲೆಯಲ್ಲಾಡಿಸಿದೆವು. 'ನೋಡಿ, ಅವರೇ' ಪಕ್ಕದ ಗೋಡೆಗೆ ನೇತುಹಾಕಿದ ಭಾವಚಿತ್ರವನ್ನು ತೋರಿಸಿ ಶುಷ್ಕ ನಗೆ ಬೀರಿದರು. ದಿವಂಗತ ಭಾರತಿ ಫೋಟೊದ ಫ್ರೇಮಿನಡಿ ಮುಗುಳ್ನಗುತ್ತಿದ್ದರು. ಆದರೆ ನಮಗೆ ನಗಲಾಗಲಿಲ್ಲ. ಹೃದಯ ತುಂಬಿ ಬಂತು.

'ಈಗ ಬಂದೆ' ಅನ್ನುತ್ತ ಕುಮಾರ್ ಒಳಗೆ ಹೋದರು. ಐದು ನಿಮಿಷದಲ್ಲಿ ಕಾಫಿ–ಬಿಸ್ಕತ್‌ನೊಂದಿಗೆ ಹೊರಬಂದರು. 'ಪ್ಲೀಸ್ ಹ್ಯಾವ್ ಇಟ್' ಅವರು ಹಿಡಿದುಕೊಂಡ ಟ್ರೇ ನವಿರಾಗಿ ಕಂಪಿಸುತ್ತಿತ್ತು. ನಮಗೆ ಬಿಸ್ಕತ್ ತಿನ್ನಲಾಗದೇ ಒಂದು ಗುಟುಕು ಕಾಫಿಯನ್ನು ಕುಡಿದ ಶಾಸ್ತ್ರ ಮಾಡಿದೆವು. 'ಇನ್ನು ಮುಂದೆಯೂ ಹೀಗೇ ಬರ್ತಾ ಇರಿ. ನಿಮ್ಮ ಫ್ರೆಂಡನ್ನು ಮರೀಬೇಡಿ, ಪ್ಲೀಸ್' ಅಂತ ಭಾರವಾದ ದನಿಯಲ್ಲಿ ಅವರು ಹೇಳಿದಾಗ ನಮಗೆ ಮಾತನಾಡಲು ಬಾಯಿಯೇ ಬರಲಿಲ್ಲ. ಅವರನ್ನೊಮ್ಮೆ ಬಿಗಿದಪ್ಪಿ, ಬೆನ್ನು ತಟ್ಟಿ ನಿಧಾನವಾಗಿ ಹೊರಡಲನುವಾದೆವು. ನಮ್ಮ ಕಾರು ಮರೆಯಾಗುವವರೆಗೂ ಅವರು ಕೈ ಬೀಸುತ್ತಾ ಇರುವುದು ಕಾರಿನ ಕಿಟಕಿಯಿಂದ ಗೋಚರಿಸುತ್ತಿತ್ತು.


**ಎಸ್.ಪಿ. ಶ್ಯಾನಭಾಗ**

ಭಾರತೀಯ ಜೀವ ವಿಮಾ ನಿಗಮದ ನಿವೃತ್ತ ಅಧಿಕಾರಿ. ಉತ್ತರ ಕನ್ನಡ ಜಿಲ್ಲೆಯ ಕುಮಟಾ ತಾಲೂಕಿನ ಹರಕಡೆ ಹುಟ್ಟಿದೂರು. ಕತೆ, ಪ್ರಬಂಧ, ಹಾಸ್ಯ ಲೇಖನಗಳು ನಾಡಿನ ವಿವಿಧ ನಿಯತಕಾಲಿಕಗಳಲ್ಲಿ ಪ್ರಕಟವಾಗಿವೆ. ಪ್ರಸ್ತುತ ಬೆಂಗಳೂರಿನಲ್ಲಿ ವಾಸ.